C.C- 413/2024

ಪಿ. ಡಬ್ಲೂ – 1

ಸಾಕ್ಷಿಯನ್ನು ದಿಃ 15.04.2026 ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ಆರೋಪಿತನ ಪರ ವಕೀಲರಾದ ಶ್ರೀ. ಪಿ.ಎಸ್ ರವರಿಂದಃ**

**1.** ನಾನು ಶೈಲಾರವರೊಂದಿಗೆ ಅಡುಗೆ ಸಹಾಯಕನಾಗಿ ಕೆಲಸ ಮಾಡುತ್ತಿದ್ದೇನೆ. ಅಡುಗೆ ಬಡಿಸುವ ಕೆಲಸ ಪ್ರತಿ ದಿನ ಸಿಗುವುದಿಲ್ಲ ಎಂದರೆ ಸರಿಯಲ್ಲ. ಅಡುಗೆ ಸಹಾಯಕನಾಗಿ ಅಡುಗೆ ಬಡಿಸಲು ಹೋದರೆ ನನಗೆ 800–1,000 ರೂ.ಗಳನ್ನು ಪ್ರತಿದಿನ ಕೊಡುತ್ತಾರೆ. ಆರೋಪಿತನು ಆನಂದಪುರದ ರಂಗನಾಥ ಬೀದಿಯಲ್ಲಿ ವಾಸವಾಗಿದ್ದಾನೆ. ಸುಮಾರು 4–5 ವರ್ಷಗಳಿಂದ ಆರೋಪಿತನು ನನಗೆ ಪರಿಚಯವಿರುತ್ತಾನೆ.

**2.** ನನ್ನ ತಂದೆ ರವೀಂದ್ರಭಟ್ಟರವರು ಸದ್ಗುರು ಫೈನಾನ್ಸ್‌ನ ಪ್ರೊಪ್ರೈಟರ್. ಆರೋಪಿತನು ನನ್ನ ತಂದೆಯ ಬಳಿ ಫೈನಾನ್ಸ್ ನಲ್ಲಿ ಹಣಕಾಸು ವ್ಯವಹಾರವನ್ನು ಮಾಡಿದ್ದಾನೆ ಎಂದರೆ ನನಗೆ ಗೊತ್ತಿಲ್ಲ. ದಿನಾಂಕ 18.10.2023 ರಂದು ಆರೋಪಿತನು ನನ್ನ ಬಳಿ 1 ಲಕ್ಷ ಹಣವನ್ನು ಸಾಲವಾಗಿ ಕೇಳಿದನು. ಆರೋಪಿತನಿಗೆ ನಾನು 90 ಸಾವಿರ ರೂ. ಹಣವನ್ನು ನಾನು ದಿನಾಂಕ 26.10.2023 ರಂದು ನಗದಾಗಿ ಕೊಟ್ಟಿದ್ದೇನೆ. ಆ ಹಣವು ನನಗೆ ಅಡುಗೆ ಬಡಿಸುವ ಕೆಲಸದಿಂದ ಬಂದಿತ್ತು. ಸದರಿ ವಿಷಯವನ್ನು ನನ್ನ ದೂರಿನಲ್ಲಿ ಹೇಳಿ ಬರೆಸಿಲ್ಲ.

**3.** ನನಗೆ ಇನ್ನೂ ಮದುವೆಯಾಗಿಲ್ಲ. ನಮ್ಮ ಕುಟುಂಬದ ವ್ಯವಹಾರವನ್ನು ನನ್ನ ತಂದೆ ಮಾಡುತ್ತಿದ್ದಾರೆ. ಆರೋಪಿತನಿಗೆ 90 ಸಾವಿರ ರೂ. ಹಣವನ್ನು ನಮ್ಮ ಮನೆಯಲ್ಲಿಯೇ ಕೊಟ್ಟಿದ್ದೇನೆ. ಹಣ ಕೊಟ್ಟಾಗ ನಮ್ಮ ಮನೆಯಲ್ಲಿ ಯಾರು ಇರಲಿಲ್ಲ. ದಿನಾಂಕ 26.10.2023 ರ ಪೂರ್ವದಲ್ಲಿ ನನ್ನ ಮತ್ತು ಆರೋಪಿತನ ನಡುವೆ ಯಾವುದೇ ಹಣಕಾಸಿನ ವ್ಯವಹಾರ ನಡೆದಿಲ್ಲ. ದಿನಾಂಕ 15.02.2024 ರಂದು ಆರೋಪಿತನಿಗೆ ನಾನು ನಿಪಿ–3 ರಂತೆ ನೋಟೀಸ್ ಅನ್ನು ನೀಡಿದ್ದೇನೆ. ಸದರಿ ನೋಟೀಸ್ ಆರೋಪಿತನು ಪಾರ್ಟಿ ಲೆಫ್ಟ್ ಅಡ್ರೆಸ್ ವಿತ್ ಔಟ್ ಇನ್ಫೊರ್ಮೇಶನ್ ಎಂದು ನಿಪಿ–6 ರಂತೆ ವಾಪಸ್ಸಾಗಿದೆ ಎಂದರೆ ಸರಿ.

**4.** ನನ್ನ ದೂರಿನಲ್ಲಿ ಕಾಣಿಸಿದ ವಿಳಾಸದಲ್ಲಿ ಆರೋಪಿತನು ವಾಸವಾಗಿಲ್ಲ ಎಂದರೆ ಸರಿಯಲ್ಲ. ಪ್ರಸ್ತುತ ದೂರಿನ ಸಾಲಕ್ಕೆ ಸಂಬಂಧಪಟ್ಟಂತೆ ನಾನು ಆರೋಪಿತನಿಂದ ಪ್ರಾಮಿಸರಿ ನೋಟ್ ಅನ್ನು ಪಡೆದುಕೊಂಡಿಲ್ಲ. ಆರೋಪಿತನು ಯಾವ ವರ್ಷದ ಚೆಕ್ ಅನ್ನು ನನಗೆ ಕೊಟ್ಟ ಎಂದು ಈಗ ಹೇಳಲು

ಆಗುವುದಿಲ್ಲ. ನನ್ನ ದೂರಿನಲ್ಲಿ ಹೇಳಿದಂತೆ ಆರೋಪಿತನು ನನಗೆ ಹಣ ಕೇಳಿಲ್ಲ ಮತ್ತು ನಾನು ಅವನಿಗೆ ಹಣ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಿಪಿ–1 ರ ಚೆಕ್ಕು ಹಾಗೂ ಈ ದೂರಿನ ವ್ಯವಹಾರವು ನನ್ನ ತಂದೆ ಮತ್ತು ಆರೋಪಿತನ ನಡುವೆ ನಡೆದಿರುವ ವ್ಯವಹಾರ ಎನ್ನುವುದು ಸರಿಯಲ್ಲ. ಆರೋಪಿತನು ನನಗೆ ಪರಿಚಯಸ್ಥನಲ್ಲ ಎನ್ನುವುದು ಸರಿಯಲ್ಲ. ನಿಪಿ–4 ರಲ್ಲಿ ಆರೋಪಿತನ ತಂದೆಯ ಹೆಸರು ಗುರುಗಪ್ಪ ಎಂದು ನಮೂದಾಗಿದೆ ಎಂದರೆ ಸರಿ. ನಿಪಿ–4 ರಲ್ಲಿ ಆರೋಪಿತನ ತಂದೆಯ ಹೆಸರು ತಪ್ಪಾಗಿರುವ ವಿಷಯವನ್ನು ನನ್ನ ದೂರಿನಲ್ಲಿ ಬರೆಸಿಲ್ಲ ಎಂದರೆ ಸರಿ.

**5.** ಸದ್ಗುರು ಫೈನಾನ್ಸ್ ಅನ್ನು ನಾನು ಮತ್ತು ನನ್ನ ತಂದೆ ಜಂಟಿಯಾಗಿ ನಡೆಸುತ್ತಿಲ್ಲ. ನಾನು ಆದಾಯ ತೆರಿಗೆ ಪಾವತಿದಾರನಲ್ಲ. ನಾನು ದ್ವಿತೀಯ ಪಿಯುಸಿವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ಚೆಕ್ ಅನ್ನು ಆರೋಪಿತನು ಮೊದಲೇ ಬರೆದುಕೊಂಡು ಬಂದಿದ್ದು, ನನ್ನ ಮುಂದೆ ಸಹಿ ಮಾಡಿ ಕೊಟ್ಟನು. ನಿಪಿ–1 ರಲ್ಲಿನ ಬರವಣಿಗೆ ಆರೋಪಿತನದ್ದಲ್ಲ ಎಂದರೆ ಸರಿಯಲ್ಲ. ನಿಪಿ–1 ರ ಚೆಕ್ ಅನ್ನು ನಾನೇ ತುಂಬಿಕೊಂಡಿದ್ದೇನೆ ಎನ್ನುವುದು ಸರಿಯಲ್ಲ. ಆರೋಪಿತನ ತಂದೆಯ ಹೆಸರು ದುರ್ಗಪ್ಪ.

**ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

ಪ್ರಧಾನ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಸಾಗರ.